**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ ನ್ಯಾಯಾಲಯ ಕೊಪ್ಪಳ**

ಸಿ.ಸಿ.ನಂಃ 74/2017

| | |
|---|---|
| CW | 8 |
| PW | 6 |

ದಿನಾಂಕಃ 26-06-2024 ರಂದು **ಸಾಕ್ಷಿಗೆ ಪ್ರಮಾಣ ಭೋದಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | ಸುಬಾಷ್ |
| ತಂದೆ ಹೆಸರು | ಸಂಗಪ್ಪಸಜ್ಜನ್ |
| ವಯಸ್ಸು | 51 ವರ್ಷ |
| ಉದ್ಯೋಗ | ಸಿ ಹೆಚ್ ಸಿ 178 ನಗರ ಠಾಣೆ ಕೊಪ್ಪಳ |
| ವಾಸಸ್ಥಳ | ಕೊಪ್ಪಳ |

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

ನಾನು 2015 ರಿಂದ 2018 ವರೆಗೆ ಪಿರ್ಯಾದಿ ಠಾಣೆಯಲ್ಲಿ ಪಿ.ಸಿ. ಆಗಿ ಕಾರ್ಯ ನಿರ್ವಹಿಸಿರುತ್ತೇನೆ.

ಚಾಸಾ 13 ರವರ ಆದೇಶದ ಮೇರೆಗೆ ಕೊಪ್ಪಳದ ವೃತ್ತ ಕಚೇರಿಯಲ್ಲಿ ಕೆಲಸಕ್ಕೆ ನಿಯೋಜನೆಗೊಂಡು ದಿಃ 20-06-2016 ರಂದು ರಾತ್ರಿ 11.00 ಗಂಟೆಗೆ ಗಸ್ತು ಕರ್ತವ್ಯಕ್ಕೆ ನಾನು ಮತ್ತು ಚಾಸಾ 9 ರಿಂದ 11 ರವರು ಚಾಸಾ 13 ರವರ ಜೊತೆ ಹೋಗಿದ್ದು, ಸಿಂದೋಗಿ, ಆಳವಂಡಿ, ಹಲಗೇರಿ, ಕೊಪ್ಪಳ ನಗರ, ಗಿಣಿಗೇರಾ ಮುನಿರಾಬಾದ್ ಕಡೆಗೆ ಹೋಗಿದ್ದು, ದಿಃ 21-06-2016 ರಂದು ಬೆ. 04.30 ಕ್ಕೆ ಲಿಂಗಪೂರ ಹುಲಗಿ ಮಾರ್ಗವಾಗಿ ಹಿಟ್ನಾಳ ಕ್ರಾಸ್ ಬಳಿ ಹೋಗುತ್ತಿದ್ದಾಗ ರೈಲ್ವೆ ಹಳಿಯನ್ನು ದಾಟಿದ ನಂತರ ಒಂದು ಬಿಳಿ ಬಣ್ಣದ ಟಾಟ ಮ್ಯಾಜಿಕ್ ವಾಹನದಲ್ಲಿ ಒಂದು ಫ್ರಿಡ್ಜ ಮತ್ತು ಇನ್ನಿತರ ವಸ್ತುಗಳನ್ನು ತುಂಬಿಕೊಂಡು ಕೆಲವು ಜನರು ಸಹ ಇದ್ದು, ಅಗ ಅ ವಾಹನವನ್ನು ನಿಲ್ಲಿಸಿ, ಚಾಸಾ 13 ರವರು ಅವರನ್ನು ವಿಚಾರಿಸಿದ್ದು ಅವರು ಒಟ್ಟು 6 ಜನ ಇದ್ದು, ಅವರುಗಳ ಹೆಸರುಗಳನ್ನು ರಾಕೇಶ ಅಲಿಯಾಸ್ ರಾಕಿ, ರವಿ ಕುಮಾರ ಅಲಿಯಾಸ್ ರವಿ, ಸುಬಾನ್ ತಂದೆ ಮಾಬುಸಾಬ್, ನಾಗರಾಜ, ಕರಿಯಪ್ಪ, ಬಸವರಾಜ ಎಂದು ತಿಳಿಸಿರುತ್ತಾರೆ.

2. ವಾಹನವನ್ನು ತಪಸಾಣೆ ಮಾಡಿದಾಗ ಸದರಿ ವಾಹಂನಲ್ಲಿ ಒಂದುಫ್ರಿಡ್ಜ, ಒಂದು ಟಿವಿ, ಒಂದು ಜಿರಾಕ್ಸ ಮಿಷನ್, ಕಂಪ್ಯೂಟರ್ ಮನಿಟರ್ ಗಳು ಮತ್ತು ಇತರೇ ವಸ್ತುಗಳು ಇದ್ದವು. ಚಾಸಾ 13 ರವರು ಸದರಿ ವಸ್ತುಗಳ ಬಗ್ಗೆ ಕೇಳಲಾಗಿ ಅವರು ಯಾವುದೇ ಸರ್ಮಪಕ ಉತ್ತರ ನೀಡದ ಕಾರಣ ಶಾಲೆಯ ವಸ್ತುಗಳು ಕಳ್ಳತನವಾಗುತ್ತಿದಂ್ದ ಕಾರಣ ಸಂಶಯ ಬಂದು ಅವರುಗಳನ್ನು ವಾಹನ ಮತ್ತು ಸಮಾಗ್ರಿಗಳ ಸಮೇತ ಕೊಪ್ಪಳ ಗ್ರಾ. ಠಾಣೆಗೆ ಕರೆ ತಂದಿರುತ್ತೇವೆ.

3. ಚಾಸಾ 13 ರವರು ಸದರಿ ವ್ಯಕ್ತಿಗಳನ್ನು ಪ್ರತ್ಯೇಕವಾಗಿ ವಿಚಾರಿಸಿದಾಗ ಅವರು ತಿಳಿಸಿದ್ದೇನೆಂದರೆ, ಅವರು ಒಂದು ತಿಂಗಳ 10 ದಿನಗಳ ಹಿಂದೆ ಕೊಪ್ಪಳ ಗದಗ ರಸ್ತೆಯ ದದೇಗಲ್ ಹತ್ತಿರ ಈಶಣ್ಣ ಗುಳಗಣ್ಣವರ್ ಕಾಲೇಜಿನ ಆಡಳಿತಾಧಿಕಾರಿಗಳ ಕಚೇರಿ, ಕಂಪ್ಯೂಟರ್ ಲ್ಯಾಬ್ ಕೊಠಡಿ ಗಳ ಬಾಗಿಲುಗಳ ಬೀಗ ಮುರಿದು ಒಂದುಫ್ರಿಡ್ಜ, ಒಂದು ಟಿವಿ, ಒಂದು ಜಿರಾಕ್ಸ ಮಿಷನ್, ಕಂಪ್ಯೂಟರ್ ಮನಿಟರ್ ಗಳು ಮತ್ತು ಸೊಲರ್ ಬ್ಯಾಟರಿ, ಮಿಕ್ಸಿ, ಟೇಬಲ್ ಪ್ಯಾನ್, ಗ್ಯಾಸ್ ಸ್ಟೋವಂ, ಹಾರ್ಡ ಡಿಸ್ಕ, ಇತರೇ ವಸ್ತುಗಳನ್ನು ಕಳ್ಳತನ ಮಾಡಿಕೊಂಡು ತಂದಿರುವುದಾಗಿ ಹೇಳಿರುತ್ತಾರೆ. ನಂತರ ಸದರಿ ವಸ್ತುಗಳನ್ನು ಮಾರಾಟ ಮಾಡುವ ಸಲುವಾಗಿ ವಾಹನದಲ್ಲಿ ತೆಗೆದುಕೊಂಡು ಹೋಗುತ್ತಿರುವುದಾಗಿ ತಿಳಿಸಿದರು.

4. ಚಸಾ 13 ರವರು ಚಾಸಾ 10 ರವರಿಗೆ ಇಬ್ಬರು ಪಂಚರನ್ನು ಕರೆತರಲು ಸೂಚಿಸಿದ್ದು, ಅಪ್ರಕಾರ ಚಾಸಾ 4 ಮತ್ತು 5 ರವರನ್ನು ಪಂಚರನ್ನಾಗಿ ಕರೆ ತಂದಿರುತ್ತಾರೆ. ಸದರಿ ಪಂಚರಿಗೆ ವಿಷಯವನ್ನು ತಿಳಿಸಿ ವಹಾನವನ್ನು ಮತ್ತು ಅದರಲ್ಲಿರುವ ವಸ್ತುಗಳನ್ನು ಜಪ್ತಿ ಮಾಡಿಕೊಂಡು ಪಂಚನಾಮೆಯನ್ನು ಮಾಡಿರುತ್ತೇವೆ. ಇನ್ನುಳಿದ ವಸ್ತುಗಳ ಬಗ್ಗೆ ಚಾಸಾ 13 ರವರು ಅರೋಪಿಗಳನ್ನು ಕೇಳಿದಾಗ ಸೋಲರ್ ಬ್ಯಾಟರಿ ಮತ್ತು ಪ್ಯಾನಲ್, 3 ನೇಆರೋಪಿಯ ಮನೆಯಲ್ಲಿ ಇರುವುದಾಗಿ ತಿಳಿಸಿರುತ್ತಾರೆ. ಮಿಕ್ಸಿ ಮತ್ತು ಟೇಬಲ್ ಪಾನ್ ಮತ್ತು ಗ್ಯಾಸ್ ಸ್ಟೋಂ 6 ನೇ ಆರೋಪಿಯ ಮನೆಯಲ್ಲಿ ಇರುವುದಾಗಿ ತಿಳಿಸಿರುತ್ತಾರೆ. ಸದರಿ ವಸ್ತುಗಳು ಠಾಣಾ ಗುನ್ನ ನಂ. 98/2016 ರ ಪ್ರಕರಣಕ್ಕೆ ಸಂಬಂಧಿಸಿದ ಕಾರಣ ಸದರಿ ಪ್ರಕರಣದಲ್ಲಿ ಈ ಮೇಲೆ ಹೇಳಿದ ಆರೋಪಿಳನ್ನು

ದಸ್ತಗಿರಿಯನ್ನು ಚಾಸ 13 ರವರು ಮಾಡಿರುತ್ತಾರೆ. ನಂತರ ಮೊಬೈಲ್ ಗಳನ್ನು ಜಪ್ತಿಪಡಿಸಿಕೊಂಡು ಆರೋಪಿಳ ಸ್ವಖುಷಿ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

(ಮುಂದುವರೆದ ಮುಖ್ಯ ವಿಚಾರಣೆಗಾಗಿ ಸಸಅ ರವರು ಸಮಯಾವಕಾಶ ಕೋರಿದ ಕಾರಣ ಮುಂದೂಡಲಾಗಿದೆ. )

**( ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ

**ಹೆ. ಜೆ ಎಂ ಎಫ್ ಸಿ ಕೊಪ್ಪಳ.**